ಶ್ರೀಹರಿವಾಯುಗಳ ಚಿತ್ತ ! ಅದಕ್ಕಾಗಿ ಚಿಂತಿಸಬಾರದು" ಎಂದು ಹೇಳಿ ವೆಂಕಣ್ಣ ಪಂತನನ್ನು ಸಾಂತ್ವನಗೊಳಿಸಿ ಅವನೊಡ ಬಿಡಾರಕ್ಕೆ ದಯಮಾಡಿಸಿದರು.

## ೧೯೯. ಕೃಷ್ಣದ್ವೈಪಾಯನರು ಹರಿಪದ ಸೇರಿದರು.

ಸೌಮ್ಯಸಂವತ್ಸರದ ಜ್ಯೇಷ್ಠಶುಕ್ಲ ಪೂರ್ಣಿಮಾ[454] ಪ್ರತಿದಿನದ ಪದ್ಧತಿಯಂತೆ ಶ್ರೀರಾಘವೇಂದ್ರ ಗುರುಸಾರ್ವಭೌಮರ ತುಂಗಾಭದ್ರಾನದಿಯತೀರದ ವಿಸ್ತಾರವಾದ ಬಂಡೆಯ ಮೇಲೆ ಆತ್ಮೀಯರು, ವಿದ್ವಜ್ಜನರೊಡನೆ ಮಂಡಿಸಿದ್ದಾರೆ. ಸೂರ್ಯನ ಅಸ್ತಂಗತನಾಗಲು ಇನ್ನೂ ಸಮಯವಿದೆ. ಕೋಲಬಾಲೆಯ ಮಂಜುಳ ತರಂಗಗಳ ಕಲರವ ಮಂಜುಳನಾದ, ತಣ್ಣನೆಯಗಾ ಎಲ್ಲರ ಮನಸ್ಸನ್ನೂ ಆಹ್ಲಾದಗೊಳಿಸುತ್ತಿದೆ. ವಿದ್ವಾನ್ ಕೃಷ್ಣಾಚಾರ್ಯರು ವೇದಾಂತಶಾಸ್ತ್ರದಲ್ಲಿನ ಒಂದು ಜಟಿಲ ತತ್ವ ವಿಚಾರವನ್ನ ಶ್ರೀಯವರ ಮುಂದೆ ತಮ್ಮ ಸಂದೇಹವನ್ನು ಮಂಡಿಸಿ ಅದಕ್ಕೆ ಸಮಾಧಾನವನ್ನು ತಿಳಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು ಶ್ರೀಗುರುರಾಜರು ಆ ಜಟಿಲ ತತ್ವವನ್ನು ಎಳೆಎಳೆಯಾಗಿ ಬಿಡಿಸಿ, ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ನಿರೂಪಿಸುತ್ತಿದ್ದಾರ ತಾವು ಅತಿ ಜಟಿಲವೆಂದು ಭಾವಿಸಿದ ವಿಚಾರವನ್ನು ಅತಿ ಸುಲಭವಾಗಿ ಅರ್ಥವಾಗುವಂತೆ ಉಪಪಾದಿಸುತ್ತಿರುವುದನ ಆಲಿಸುತ್ತಾ ಎಲ್ಲರೂ ಆನಂದಪರವಶರಾಗಿದ್ದಾರೆ. ಆಗ ಶ್ರೀಗುರುರಾಯರು ಇದ್ದಕ್ಕಿದ್ದಂತೆ ಆಕಾಶದತ್ತ ದೃಷ್ಟಿಹಾಯಿಸಿ ನಗೆಮೊಗದಿಂ ಕರಮುಗಿದರು. ಅಲ್ಲಿದ್ದವರು ಇದೇನೆಂದು ಆಶ್ಚರ್ಯದಿಂದ ತಾವೂ ಆಕಾಶದತ್ತ ನೋಡಿದರು. ಆದರೆ ಅವರಿಗೆ ಅಲ್ಲಿ ಏನು ಕಾಣಿಸಲಿಲ್ಲ.

ಶ್ರೀಗಳವರು ನಿಟ್ಟುಸುರುಬಿಟ್ಟು ತಲೆತಗ್ಗಿಸಿ ಕುಳಿತರು. ಕುತೂಹಲವನ್ನು ಹತ್ತಿಕ್ಕಲಾಗದೆ ಮಠದ ಪಂಡಿತರೊಬ್ಬರ "ಮಹಾಸ್ವಾಮಿ, ತಾವು ಇದ್ದಕ್ಕಿದ್ದಂತೆ ಆಕಾಶದತ್ತ ನೋಡಿ ಕರ ಬೀಸೋಣವಾಯಿತು. ಅದೇನೆಂದು ನಮಗೆ ಅರ್ಥವಾಗಲಿಲ್ಲ ದಯಮಾಡಿ ಅದೇನೆಂದು ತಿಳಿಸಬೇಕಾಗಿ ಬೇಡುತ್ತೇನೆ" ಎಂದು ಬಿನ್ನವಿಸಿದರು.

ಆಗ ಶ್ರೀಗುರುರಾಜರು "ಶ್ರೀಕೃಷ್ಣದ್ವೈಪಾಯನರು ಹರಿಪದ ಸೇರಿದರು. ಈಗವರು ವಿಮಾನಾರೂಢರಾಗಿ ಈ ಲೋಕವನ ತ್ಯಜಿಸಿ ಹೋಗುತ್ತಿದ್ದರು. ನಮ್ಮನ್ನು ಕಂಡು ಅಭಿವಂದಿಸಿದರು, ಶ್ರೀಹರಿಪುರಕ್ಕೆ ದಯಮಾಡಿಸುತ್ತಿರುವ ಅವರಿಗೆ ನಾವ ಪ್ರತ್ಯಭಿವಾದನ ಮಾಡಿದೆವು, ಅಷ್ಟೇ:" ಎಂದು ಅಪ್ಪಣೆ ಕೊಡಿಸಿದರು.

ಶ್ರೀಪಾದಂಗಳವರ ಅದ್ಭುತ ಯೋಗಶಕ್ತಿ, ಮಹಿಮಾದಿಗಳನ್ನು ಕಂಡು ಪಂಡಿತ ಮಂಡಲಿ, ಆತ್ಮೀಯರು ಸೋಜಿಗಗೊಂಡ ಶ್ರೀರಾಯರನ್ನು ಸ್ತುತಿಸಿದರು. ಶ್ರೀಮಠದ ಪಂಡಿತರಿಗೆ ಶ್ರೀಗುರುರಾಜರ ಅತಿಶಯ ಮಹಾತ್ಮ್ಯ, ಅಸಾಧಾರಣ ಯೋಗಶಕ್ತಿಗ ಪರಿಚಯವು ಅನೇಕಸಲ ಆಗಿದ್ದರೂ ಗುರುವರರ ಅಪೂರ್ವ ಮಹಿಮಾತಿಶಯಗಳು ಅಭಿವ್ಯಕ್ತವಾದಾಗಲೆಲ್ಲಾ ಅದರಿಂದವರ ವಿಸ್ಮಿತರಾಗಿ ಗುರುಗಳ ನೂತನಮಹಿಮೆಯ ಪರಿಚಯದಿಂದ ಆನಂದಿಸುತ್ತಿದ್ದುದು ರೂಢಿಯಾಗಿ ಹೋಗಿತ್ತು! ಜ್ಞಾನಿಗ ವಿಚಾರವೇ ಹೀಗೆ. ಶ್ರೀಕೃಷ್ಣದ್ವೈಪಾಯನಯತಿಗಳು ಮಹಾವೈರಾಗ್ಯ ಸಂಪನ್ನರು, ಜ್ಞಾನಿಗಳು, ಅವರು, ಪೀಠಾಧಿಪತ್ಯವನು ಆಶಿಸದೇ ಬಿಟ್ಟುಬಿಟ್ಟ ಮಹನೀಯರು. ಅಂತರ್ಮುಖಿಗಳಾದ ಅವರು ಸರ್ವದಾ ಜಪ-ತಪ-ಭಗವತ್ಪೂಜಾರಾಧ ಪಾಠಪ್ರಚನಗಳಲ್ಲೇ ಆಸಕ್ತರಾಗಿ ವೈರಾಗ್ಯ ಭಕ್ತಿಗಳಿಂದ ಶ್ರೀಹರಿಯ ಉಪಾಸನೆ, ಮಾಡುತ್ತಾ ಕಾಲಕಳೆಯುತ್ತಿದ್ದರು.

ಶ್ರೀಕೃಷ್ಣದ್ವೈಪಾಯನರ ಬೃಂದಾವನವು ಭೀಮಾನದಿಯ ತಟದ ಮೇಲ್ಭಾಗದಲ್ಲಿರುವ ಕುಸುಮೂರ್ತಿ ಎಂಬ ಗ್ರಾಮದಲ್ಲಿದ ಅದೊಂದು ಅಪೂರ್ವಸ್ಥಳ, ಮಗ್ಗಲಿನಲ್ಲಿ ಭೀಮಾನದಿ, ಸ್ವಲ್ಪದೂರದಲ್ಲಿಯೇ ಕೃಷ್ಣಾ-ಭೀಮಾನದಿಗಳ ಪವಿತ್ರ ಸಂಗಮ ಶ್ರೀಸಂಗಮೇಶ್ವರನ ದಿವ್ಯಸನ್ನಿಧಾನ. ಎಲ್ಲಕ್ಕಿಂತ ಹೆಚ್ಚಾಗಿ ಶ್ರೀರುದ್ರಾಂಶರೆಂದು ಪ್ರಖ್ಯಾತರಾದ, ಜ್ಞಾನಿನಾಯಕರೂ, ತಪೋನಿಧಿಗಳು